

ನಾವೆಂದೂ ಪಕ್ಕಾ ಮಾಡಿಕೊಳ್ಳದ ಸೋಂಬೇರಿಗಳು. ಹೀಗಾಗಿ ಅನೇಕ ಸಲ ಚಳಿಮಳೆಯಲ್ಲಿ ಸಿಲುಕಿ ನಮ್ಮ ಕ್ಯಾಮೆರಾಗಳು ಜಖಂ ಆಗಿದ್ದಿದೆ. ಪಾಚಿ ಮೇಲೆ ಕಾಲಿಟ್ಟು ಜಾರಿಬಿದ್ದು ಮುಖಮುಸುಡಿ ಜಜ್ಜಿಕೊಂಡಿದ್ದೂ ಉಂಟು. ನೀರಲ್ಲಿ ನೆನೆದ ಲೆನ್ಸ್ಆಗಲಿ, ಕ್ಯಾಮೆರಾವೇ ಆಗಲಿ ಮತ್ತೆ ರಿಪೇರಿ ಮಾಡಿಸಿಕೊಳ್ಳಲು ರಾಶಿ ದುಡ್ಡು ಸುರಿಯಬೇಕು. ಲೆನ್ಸಿಗೆ ಫಂಗಸ್ ರೋಗ ಅಂಟಿಕೊಳ್ಳುವ ಅಪಾಯವಾದರಂತೂ ಗ್ರಹಚಾರ ಬೆನ್ನುಬಿದ್ದಂತೆ. ಇಷ್ಟೆಲ್ಲಾ ರಿಸ್ಕುಗಳ ನಡುವೆಯೇ ಮಳೆಗಾಲದ ಚಿತ್ರೀಕರಣವನ್ನು ನಡೆಸುವುದು.

ಅಸಲಿಗೆ ಈ ಏನಾತಿ ಪಕ್ಷಿ ಸಿಗೋದೇ ಗೋವಾ ಮತ್ತು ಮಹಾರಾಷ್ಟ್ರದ ಉದ್ದಕ್ಕೂ ಪಸರಿಸಿರುವ ಸಹ್ಯಾದ್ರಿ ಪರ್ವತ ಶ್ರೇಣಿಯ ಅಂಚಿನಲ್ಲಿ. ಇಲ್ಲಿಗೆ ತಲುಪಲು ರಾತ್ರಿಯೆಲ್ಲಾ ಪ್ರಯಾಣಿಸಿ ಹೋಗಬೇಕಿತ್ತು. ಬೆಂಗಳೂರಿನಿಂದ ಬಸ್ಸಿನಲ್ಲಿ ಬಂದಿಳಿದ ಮೂವರು ಗೆಳೆಯರು ದಾವಣಗೆರೆಯಲ್ಲಿ ನನಗಾಗಿ ಕಾಯುತ್ತಿದ್ದರು. ನಮ್ಮ ದೊಡ್ಡ ಕ್ಯಾಮೆರಾ ಬ್ಯಾಗುಗಳು, ಟ್ರೈಪ್ಯಾಡುಗಳು ಬಾಡಿಗೆ ಮನೆ ಖಾಲಿ ಮಾಡಿ ಲಗೇಜು ಸಾಗಿಸುವ ಸಂಸಾರಸ್ತರ ರೀತಿಯಲ್ಲಿ ಗಡ್ಡದ್ದಾಗಿರುತ್ತವೆ. ಇವನ್ನೆಲ್ಲಾ ಕಾರಿನಲ್ಲೇ ಹೊತ್ತು ಹೋಗಬೇಕು. ಫೋಟೋಗ್ರಫಿಯಷ್ಟೇ ನನಗೆ ಥ್ರಿಲ್ ಕೊಡುವ ಮತ್ತೊಂದು ಚಟವೆಂದರೆ ದೂರದೂರದ ಊರುಗಳಿಗೆ ಕಾರನ್ನು ಚಲಾಯಿಸಿಕೊಂಡು ಹೋಗುವ ಖಯಾಲಿ. ಹಗಲು ರಾತ್ರಿ ಎಂದು ಭೇದ ಮಾಡದೆ, ಬ್ಯಾಟ ಕೇಳದೆ ಖುಷಿಖುಷಿಯಿಂದ ಡ್ರೈವ್ ಮಾಡುವುದು ಬಲು ಇಷ್ಟ. ಫೋಟೋಗ್ರಫಿ ದುಶ್ಚಟದಲ್ಲಿ ಮುಳುಗಿದ ಅನೇಕರಿಗೆ ಈ ಅರ್ಹತೆ ಕಡ್ಡಾಯವಾಗಿ ಇದ್ದೇ ಇರುತ್ತದೆ. ನನ್ನ ಕಾರಿಗಂತೂ ಈ ದುರಭ್ಯಾಸ ನನಗಿಂತ ತುಸು ಜಾಸ್ತಿಯೇ ಇದ್ದಂತಿದೆ.

ನಾವೀಗ ತಲುಪಬೇಕಾಗಿರುವ ಊರು ಬಾಂದ ಎಂಬುದಾಗಿತ್ತು. ಅದು ಗೋವಾ ಮತ್ತು ಮಹಾರಾಷ್ಟ್ರದ ಗಡಿಯಲ್ಲಿರುವ ಚಿಕ್ಕ ಊರು. ಗೂಗಲ್ ಮ್ಯಾಪ್‌ನಲ್ಲಿ ಅಲ್ಲಿನ ಹುಡುಗ ಕಳಿಸಿದ ಲೊಕೇಶನ್ ಫಿಕ್ಸ್ ಮಾಡಿಕೊಂಡು ಹೊರಟೆವು. ಚಂಡಿ ಹಿಡಿದಂತೆ ಮಳೆ ಸುರಿಯುತ್ತಿತ್ತು. ಬೆಳಗಾವಿ ತಲುಪಿ ಅಲ್ಲಿಂದ ಎಡಕ್ಕೆ ಹೊರಳಿ ಅಂಬೋಲಿಯ ಮೂಲಕ ಘಾಟು ರಸ್ತೆಯಲ್ಲಿ ಸಾಗಬೇಕಿತ್ತು. ನಮಗೆಲ್ಲಾ ಇದು ಹೊಸ ದಾರಿ. ಜೊತೆಗೆ ಅಪರಿಮಿತ ತಿರುವುಗಳ, ಗುಂಡಿ ಗೊಟರೆಯ ಹಾದಿ. ಮುಂಗಾರ ಮಳೆಯ ಅಬ್ಬರಕ್ಕೆ ಮುಂದೆ ಏನೇನೂ ಕಾಣದು. ಜನರೇ ಇಲ್ಲದ ಅಜ್ಞಾತ ಕಾಡಹಾದಿಯ ರಾತ್ರಿ ಪಯಣ ಭಯದ ಜೊತೆಗೆ ರೋಮಾಂಚನವನ್ನೂ ಕೊಡುತ್ತದೆ. ಕೊಂಚ ಭಂಡ ಧೈರ್ಯವನ್ನೂ ಮನದಲ್ಲಿ ಹುಟ್ಟಿಸುತ್ತದೆ.

ಹಿಂದೆ ಕೂತಿದ್ದ ಜಾಣರು ನಿದ್ದೆಗೆ ಜಾರಿದ್ದರೂ, ನನ್ನ ಪಕ್ಕ ಕೂತಿದ್ದ ಶಶಿಸಿಂಗ್ ಮಾತ್ರ ಕಷ್ಟಪಟ್ಟು ನಿದ್ದೆಯನ್ನು ಹತ್ತಿಕ್ಕುತ್ತಿದ್ದರು. ಮಂಪರು ಕವಿದು ಎಲ್ಲಿ ನಾನು ಕಾರನ್ನು ಪ್ರಪಾತಕ್ಕೆ ಇಳಿಸಿ ಬಿಡುತ್ತೇನೋ ಎಂಬ ಜೀವ ಭಯ ಅವರಿಗೆ. ನಡುನಡುವೆ ಕಳ್ಳ